# ಕರ್ನಾಟಕ ಸರ್ಕಾರ
## ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

**ಸಂಖ್ಯೆ: ಇ-ಆಡಳಿತ ಶಿ.ಮಾ.ತಂ.: 02/2018-19** **ದಿನಾಂಕ : 15.12.2018**

**ಅತೀ ತುರ್ತು ಕ್ರಮಕ್ಕಾಗಿ**

## ಸುತ್ತೋಲೆ

ವಿಷಯ: **Teacher's Data Software** ತಂತ್ರಾಂಶದಲ್ಲಿ ಅಳವಡಿಸಿರುವ ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಮತ್ತು ತತ್ಸಮಾನ ಗ್ರೂಪ್ - ಬಿ ವೃಂದದ ಅಧಿಕಾರಿಗಳ ಮಾಹಿತಿಯನ್ನು ಇಂದೀಕರಿಸುವ ಬಗ್ಗೆ.

------

ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಮತ್ತು ತತ್ಸಮಾನ ಗ್ರೂಪ್ - ಬಿ ವೃಂದದ ಅಧಿಕಾರಿಗಳ ಮಾಹಿತಿಯನ್ನು ಶಿಕ್ಷಕರ ಮಾಹಿತಿ ತಂತ್ರಾಂಶದಲ್ಲಿ ಈಗಾಗಲೇ ಅಳವಡಿಸಲಾಗಿದೆ. 2017-18ನೇ ಸಾಲಿನ ಗ್ರೂಪ್-ಬಿ ವೃಂದದ ವರ್ಗಾವಣೆ ಪ್ರಕ್ರಿಯೆ ಈಗಾಗಲೇ ಪೂರ್ಣಗೊಂಡಿರುತ್ತದೆ. ಕೌನ್ಸಿಲಿಂಗ್ ಮೂಲಕ ಬೇರೆ ಶಾಲೆ/ಕಛೇರಿಗೆ ಸ್ಥಳನಿಯುಕ್ತಿ ಹೊಂದಿ, ಈಗಾಗಲೇ ಕರ್ತವ್ಯಕ್ಕೆ ಹಾಜರಾಗಿರುವ ಅಧಿಕಾರಿಗಳ ಮಾಹಿತಿಯನ್ನು ಶಿಕ್ಷಕರ ಮಾಹಿತಿ ತಂತ್ರಾಂಶದಲ್ಲಿಯೂ ಇಂದೀಕರಿಸುವುದು ಅತ್ಯವಶ್ಯಕವಾಗಿರುತ್ತದೆ.

ಸ್ಥಳ ಬದಲಾವಣೆ ಹೊಂದಿರುವ ಎಲ್ಲಾ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಮತ್ತು ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳನ್ನು ಮೂಲ ಶಾಲೆ/ಕಛೇರಿಯ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಇವರ ಟಿ.ಡಿ.ಎಸ್. ಲಾಗಿನ್‌ನಲ್ಲಿ **Teachers Transfer** ಅಡಿಯಲ್ಲಿ **Relieve** option ಬಳಸಿ ಬಿಡುಗಡೆ ಮಾಡುವುದು. ಮುಂದುವರಿದು ಗ್ರೂಪ್-ಬಿ ವೃಂದದ ಅಧಿಕಾರಿಗಳು ಸ್ಥಳನಿಯುಕ್ತಿಗೊಂಡ ಶಾಲೆ/ಕಛೇರಿಯ ಡಿಡಿಓ ಕೋಡ್ ಗೆ **Reassign** ಮಾಡುವುದು. ಕರ್ತವ್ಯಕ್ಕೆ ಹಾಜರಾದ ಶಾಲೆ/ಕಛೇರಿಯ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಇವರು ಸಂಬಂಧಿಸಿದ ಅಧಿಕಾರಿಯ ಕೆ.ಜಿ.ಐ.ಡಿ ಸಂಖ್ಯೆಯನ್ನು **Activate** ಮಾಡುವುದು ಕಡ್ಡಾಯವಾಗಿರುತ್ತದೆ.

**Relieve, Reassign** ಮತ್ತು **Activate** ಪ್ರಕ್ರಿಯೆ ಪೂರ್ಣಗೊಂಡ ನಂತರ ಗ್ರೂಪ್-ಬಿ ಅಧಿಕಾರಿಗಳ ಕಛೇರಿಯ ಡಿಡಿಓ ಲಾಗಿನ್‌ನಲ್ಲಿ ಸದರಿ ಅಧಿಕಾರಿಯ ಸಂಪೂರ್ಣ ವಿವರ, ಸೇವಾ ವಿವರಗಳನ್ನು ದಿನಾಂಕ:-20-12-2018ರೊಳಗೆ ನಿಖರವಾಗಿ ಇಂದೀಕರಿಸಲು ಈ ಸೂಚಿಸಿದೆ.

15/12/18

**ಅಪರ ನಿರ್ದೇಶಕರು(ಆಡಳಿತ)**

ಪ್ರತಿಯನ್ನು

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ನೀಡಿದೆ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಗುಲ್ಬರ್ಗಾ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

3. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ,
5. ನಿರ್ದೇಶಕರು, ಪ್ರೌಢ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ,

ಇವರಿಗೆ

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.